**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 1101/2011</u>**

ದಿನಾಂಕಃ. **31.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-1 | ಪ್ರಾಸಾ-1 |
|---|---|
| ಹೆಸರು | - ರಾಜಮ್ಮ |
| ಗಂಡನ ಹೆಸರು | - ಮುತ್ತುಮಾದಶೆಟ್ಟಿ |
| ವಯಸ್ಸು | - **40** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ನಲ್ಲಹಳ್ಳಿ ಗ್ರಾಮ |

**<u>ಮುಖ್ಯವಿಚಾರಣೆ : ಮಾನ್ಯ ಪ್ರಭಾರ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ಈಗ್ಗೆ **13** ವರ್ಷಗಳ ಹಿಂದೇ ಮದ್ಯಾಹ್ನ **3** ಗಂಟೆ ಸಮಯದಲ್ಲಿ ನಾನು ನನ್ನ ಜಮೀನಿನಲ್ಲಿ ಹಸುಗಳನ್ನು ಮೇಯಿಸುವಾಗ **3** ಜನ ಆರೋಪಿತರು ಒಟ್ಟಿಗೆ ಬಂದರು. ಆಗ ನಾನು ಅವರನ್ನು ನೋಡಿ ಭಯ ಬಿದ್ದು ಹಸುಗಳನ್ನು ಅಲ್ಲೇ ಬಿಟ್ಟು ಓಡಿ ಹೋದೆ. ಆರೋಪಿತರು ಮುಂದೊಂದು ದಿನ ನನಗೆ ಈಗ ಮಾಡುತ್ತಾರೆ ಎಂದು ನಾನು ದೂರು ಕೊಟ್ಟೆ.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ದೂರು ಎಂದು ಗುರುತಿಸಿದ್ದು, ಸದರಿ **ದೂರನ್ನು** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1(**ಎ**)** ಎಂದು ಗುರುತಿಸಲಾಯಿತು.

ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ.

ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ.**2** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**2(**ಎ**)** ಎಂದು ಗುರುತಿಸಲಾಯಿತು. ನಿ.ಪಿ.**2(**ಎ**)**

ಸಹಿಯನ್ನು ಯಾವಾಗ ಮಾಡಿದ್ದೇನೆ ನೆನಪಿಲ್ಲ. ಘಟನೆ ಆದ ನಂತರ ನಾನು ಬೇರೆ ಕಡೆ ಹೋಗಿದ್ದೆ.

ಗೈರು ಹಾಜರಿರುವ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ದಿ. **07.09.2011** ರಂದು ಮದ್ಯಾಹ್ನ **3** ಗಂಟೆ ಸಮಯದಲ್ಲಿ ನಾನು ನನ್ನ ಜಮೀನಿನ ಬಳಿ ದನ ಮೇಯಿಸುತ್ತಿರುವಾಗ ನಮ್ಮ ಊರಿನವರಾದ ಆನಂದ್ ಬಿನ್. ಹೊನ್ನೇಗೌಡ, ಮಹದೇವ ಬಿನ್. ಮಹದೇವಯ್ಯ , ಮಹದೇವ ಬಿನ್. ಈರೇಗೌಡ ಏಕಾಏಕಿ ನನ್ನ ಬಳಿ ಬಂದು ಉದ್ದೇಶಪೂರ್ವಕವಾಗಿ ಏನೇ ಸುಳೇ ಎಂದು ನನ್ನ ಹತ್ತಿರಕ್ಕೆ ಬಂದು ನನಗೆ **3** ಜನರು ಕೈ ಹಿಡಿದು ಸೀರೆ ಹಿಡಿದು ಎಳೆದಾಡಿದಾಗ ನಾನು ಜೋರಾಗಿ ಕೂಗಿ ಕೊಂಡಾಗ ನಮ್ಮ ಗ್ರಾಮದ ಕೃಷ್ಣ ಮತ್ತು ಪುಟ್ಟಮ್ಮ ಓಡಿ ಬಂದು ಬಿಡಿಸಿದರು. ಆಗ ಆರೋಪಿತರು ನೀನು ತಪ್ಪಿಸಿಕೊಂಡೆ , ನಿನ್ನನ್ನು ಇವತ್ತಲ್ಲಾ ನಾಳೆ ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ಈ ಪ್ರಕಾರ ನಿ.ಪಿ.**1** ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಘಟನೆ ಆದ ನಂತರ ನಾನು ಊರಿಗೆ ಹೋಗಿ ನಡೆ ವಿಚಾರವನ್ನು ನನ್ನ ಗಂಡನಾದ ಮುತ್ತುಮಾದಶೆಟ್ಟಿಗೆ ಮತ್ತು ನಮ್ಮ ಗ್ರಾಮದ ಮರೀಗೌಡರ ಮಗ ಚಂದ್ರು ರವರಿಗೆ ತಿಳಿಸಿ ದೂರು ನೀಡಿದ್ದೇನೆ ಎಂದರೆ ಸರಿ.

ದಿ.**08.09.2011** ರಂದು ಪೋಲಿಸರು ನಾನು ತೋರಿಸಿದಂತೆ ಸಾಕ್ಷಿದಾರರಾದ ಪುಟ್ಟಸ್ವಾಮಿ ಬಿನ್. ಚಿಕ್ಕವೀರೇಗೌಡ ಮತ್ತು ಶಿವಶಂಕರ್ ಬಿನ್. ಶಿವಮಲ್ಲೇಗೌಡರ ಸಮಕ್ಷಮ ನಿಪಿ- **2** ರ ಪ್ರಕಾರ ಪಂಚನಾಮೆ ಮಾಡಿ ಒಂದು ಹರಿದ ಬಿಳಿ ಬಣ್ಣ ಮತ್ತು ಕೆಂಪು ಚುಕ್ಕೆವುಳ್ಳ ಹರಿದಿರುವ ಸೀರೆಯನ್ನು

ವಶಪಡಿಸಿಕೊಂಡರು ಎಂದರೆ ಸರಿ. ವಶಪಡಿಸಿಕೊಂಡ ಸೀರೆಯನ್ನು ನೋಡಿದರೆ ಗುರುತಿಸಬಲ್ಲೆ.

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಈ ಹಂತದಲ್ಲಿ ಸಾಕ್ಷಿಯ ವಿಚಾರಣೆಯನ್ನು ಈ ಪ್ರಕರಣದಲ್ಲಿ ವಶಿಪಡಿಸಿಕೊಂಡ ಮುದ್ದುಮಾಲನ್ನು ಹಾಜರುಪಡಿಸದೇ ಇರುವುದರಿಂದ ವಿಚಾರಣೆಯನ್ನು ಮುಂದೂಡಲು ಕೋರಿಕೊಂಡಿದ್ದು, ಆದರೆ ಪ್ರಕರಣ 2011 ನೇ ಸಾಲಿನದ್ದು ಆಗಿರುವುದರಿಂದ 1 ನೇ ಆರೋಪಿ ಕಸ್ಟಡಿಯಲ್ಲಿರುವುದರಿಂದ ಮನವಿಯನ್ನು ತಿರಸ್ಕರಿಸಲಾಯಿತು)

**<u>ಪಾಟೀ ಸವಾಲು: 1ನೇ ಆರೋಪಿ ಪರ ಶ್ರೀ. ಎಲ್.ಎ.ಡಿ.ಸಿ. ವಕೀಲರಿಂದಃ</u>**

ಆರೋಪಿತರು ನನಗೆ ಸಂಬಂಧ ಇರುವುದಿಲ್ಲ. ಆರೋಪಿತರು ನನಗೆ ಉದ್ದೇಶಪೂರ್ವಕವಾಗಿ ಬೈದಿರುವುದಿಲ್ಲ ಮತ್ತು ನನ್ನ ಸೀರೆಯನ್ನು ಹಿಡಿದು ಎಳೆದಾಡಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ, ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತರಿಗೆ ಜಮೀನಿನ ವಿಚಾರವಾಗಿ ತಕರಾರು ಇದೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸೀರೆಯನ್ನು ಹಿಡಿದು ಎಳೆದಾಡಿದಾಗ ಯಾರೂ ಇರಲಿಲ್ಲ ಎಂದರೆ ಸರಿ. ಕೃಷ್ಣ ಮತ್ತು ಪುಟ್ಟಮ್ಮ ಇರಲಿಲ್ಲ ಎಂದರೆ ಆಮೇಲೆ ಬಂದರು. ಕೃಷ್ಣ ನನ್ನ ಸಂಬಂಧಿಕ ಪುಟ್ಟಮ್ಮ ಪಕ್ಕದ ಜಮೀನಿನವರು. ಪುಟ್ಟಮ್ಮ ಮತ್ತು ನಾನು ಜೊತೆಯಲ್ಲಿ ಇರುತ್ತೇವೆ ಎಂದರೆ ಸರಿ. ಆರೋಪಿತರು ಮತ್ತು ನನ್ನ ನಡುವೆ ತುಂಬಾ ದಿನಗಳಿಂದ ವೈಷ್ಯಮ್ಯ ಇದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ ಎಂದರೆ ನಾನು ಊರು ಬಿಟ್ಟು ಹೋಗಿದ್ದೆ ಪೋಲಿಸರು ಮನೆಯ ಬಳಿ ಬಂದು ಹೋದರು ಎಂದು ಗೊತ್ತಾಯಿತು. ನಾನು ಊರು ಬಿಟ್ಟು ಹೋದ ಕಾರಣಕ್ಕೆ ಪೋಲಿಸರು ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿ. ಪೋಲಿಸರು ನನ್ನಿಂದ ಯಾವುದೇ ಹರಿದು ಹೋದ ಸೀರೆಯನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿತರು

ಯಾವುದೇ ಅಪರಾದ ಮಾಡದೇ ಇದ್ದರೂ ಹಳೇ ವೈಷಮ್ಯಕ್ಕೆ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಮೇಲೆ ಹೇಳಿದ ಕಾರಣಕ್ಕೆ ಸಮಯಾವಕಾಶವನ್ನು ತಿರಸ್ಕರಿಸಲಾಯಿತು)

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**